**ಎಸ್.ಸಿ.ಸಂಖ್ಯೆ: 10035/2025**
**ಪ್ರಾ.ಸಾ.ಸಂಖ್ಯೆ: 10**
**ಚಾ.ಸಾ.ಸಂಖ್ಯೆ: 26**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿ: ಮುಧೋಳ</u>**

**ಎಸ್.ಸಿ.ಸಂಖ್ಯೆ: 10035/2025**

| | |
|---|---|
| ಹೆಸರು: | ರಾಮನಗೌಡ ಬಿ.ಪಾಟೀಲ |
| ತಂದೆಯ ಹೆಸರು: | ಲಕ್ಷ್ಮಣಗೌಡ |
| ವಯಸ್ಸು: | 47 ವರ್ಷ |
| ಉದ್ಯೋಗ: | ಮುಖ್ಯಪೇದೆ ಲೋಕಾಪೂರ ಪೋಲಿಸ್ ಠಾಣೆ |
| ವಾಸ: | ಲೋಕಾಪೂರ. |

**ಸಾಕ್ಷಿಯನ್ನು ದಿ: 24.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:-</u>**

ನಾನು ಡಿಸೆಂಬರ್ 2017 ರಿಂದ ಜುಲೈ-2023 ವರೆಗೆ ಮುಖ್ಯಪೇದೆ ಅಂತಾ ಮುಧೋಳ ಠಾಣೆಯಲ್ಲಿ ಕೆಲಸ ಮಾಡಿದ್ದೇನೆ.

**1.** ದಿ: **18.05.2023** ರಂದು ರಾತ್ರಿ **1-45** ಗಂಟೆಗೆ ಸರ್ಕಾರಿ ಆಸ್ಪತ್ರೆ ಮುಧೋಳದಿಂದ ಮಹಾದೇವಿ ಎನ್ನುವವರು ಜಗಳದಲ್ಲಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ ಅಂತ ಎಮ್.ಎಲ್.ಸಿ. ಮಾಹಿತಿ ಬಂತು. ನಾನು ಈ ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸಿ, ಆಸ್ಪತ್ರೆಗೆ ಹೋಗಿ ವೈದ್ಯಾಧಿಕಾರಿಗಳನ್ನು ವಿಚಾರಿಸಲಾಗಿ ಅವರು ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗೆ ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ಸೇರಿಸಿರುವುದಾಗಿ ತಿಳಿಸಿದರು. ನಂತರ ಚಾಸಾ-**31** ರವರ ಆದೇಶದಂತೆ ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ಮಧ್ಯಾಹ್ನ **12-00** ಗಂಟೆಗೆ ಹೋಗಿರುತ್ತೇನೆ. ಗಾಯಾಳು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದಾರವೋ ಇಲ್ಲವೋ ಅಂತ ಕೇಳಿ ಈಗ ನೋಡುತ್ತಿರುವ ಮನವಿಯನ್ನು ನೀಡಿರುತ್ತೇನೆ. (ಅದನ್ನು ನಿಪಿ-**31** ಅಂತ ಗುರುತಿಸಲಾಯಿತು).

**2.** ವೈದ್ಯಾಧಿಕಾರಿಗಳು ಗಾಯಾಳು ಹೇಳಿಕೆ ಕೊಡುವ ಸ್ಥಿತಿಯಲ್ಲಿದ್ದಾರೆ ಅಂತ ಈಗ ನೋಡುತ್ತಿರುವ ಶರಾ ನೀಡಿರುತ್ತಾರೆ. (ಸದರಿ ಶರಾವನ್ನು ನಿಪಿ-**31**(ಎ) ಅಂತ ಗುರುತಿಸಲಾಯಿತು). ನಂತರ ಮಧ್ಯಾಹ್ನ **3-30** ಗಂಟೆಗೆ ಅಲ್ಲಿ ದಾಖಲಾಗಿದ್ದ ಗಾಯಾಳು ಮಹಾದೇವಿ ತಂದೆ ಕರಿಯಪ್ಪ ತಳವಾರ ಇವರ ಪಿರ್ಯಾದಿಯನ್ನು ನಿಪಿ-**15** ರಂತೆ ಹೇಳಿಕೆ ಪಿರ್ಯಾದಿಯನ್ನು ಪಡೆದುಕೊಂಡು

**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 10**
**ಚಾ.ಸಾ.ಸಂಖ್ಯೆಃ 26**

ಬಂದು ಸಂಜೆ **5-45** ಗಂಟೆಗೆ ಅದನ್ನು ಚಾಸಾ-**31** ರವರಿಗೆ ಹಸ್ತಾಂತರ ಮಾಡಿರುತ್ತೇನೆ.

**<u>ಪಾಟಿಸವಾಲು: 1 & 2ನೇ ಆರೋಪಿ ಪರ ಶ್ರೀ. ಎ.ಎಸ್.ಎಸ್. ವಕೀಲರಿಂದ:</u>**

**1.** ಆ ದಿವಸ ನನ್ನ ಕರ್ತವ್ಯ ದಿ: **17.05.2023** ರ ರಾತ್ರಿ **8** ಗಂಟೆಯಿಂದ ದಿ: **18.05.2023** ರ ಬೆಳಗಿನ **8** ಗಂಟೆಯವರೆಗೆ ಠಾಣಾಧಿಕಾರಿಯಾಗಿದ್ದೆ. ಆ ಬಗ್ಗೆ ದಾಖಲೆ ಇರುತ್ತದೆ ಎಂದರೆ ಸರಿ. ನನಗೆ ಎಮ್.ಎಲ್.ಸಿ. ದಾಖಲೆ ಸರ್ಕಾರಿ ಆಸ್ಪತ್ರೆಯಿಂದ ಬಂತು. ಯಾರು ತಂದು ಕೊಟ್ಟರು ಅಂತ ನೆನಪಿಲ್ಲ. ನಾನು ಆಸ್ಪತ್ರೆಗೆ ಭೇಟಿ ನೀಡಿದಾಗ ಗಾಯಾಳುವಿನೊಂದಿಗೆ ಯಾರು ಇದ್ದರು ಅಂತ ಹೇಳಲು ಬರುವುದಿಲ್ಲ. ಕೆರೂಡಿ ಆಸ್ಪತ್ರೆಯಲ್ಲಿ ನಾನು ಶಿವಾನಂದ ಕರಿಗೌಡರ ಎಂಬ ವೈದ್ಯರನ್ನು ವಿಚಾರಿಸಿದೆ.

**2.** ನಾನು ಗಾಯಾಳುವನ್ನು ಭೇಟಿ ಮಾಡಿ ದೂರನ್ನು ಪಡೆದುಕೊಂಡಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಧ್ಯಾಹ್ನ **3-30** ಗಂಟೆಗೆ ದೂರು ಪಡೆದುಕೊಂಡೆ ಅಂತ, **5-45** ಗಂಟೆಗೆ ಅದನ್ನು ಚಾಸಾ-**31** ರವರಿಗೆ ಹಸ್ತಾಂತರಿಸಿದೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿಸವಾಲು: 3 ರಿಂದ ನೇ ಆರೋಪಿ ಪರ ವಕೀಲರ ಅದೇ ಪಾಟಿಸವಾಲನ್ನು ಅಳವಡಿಸಿಕೊಳ್ಳುತ್ತಾರೆ.</u>**

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**

**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 10**
**ಚಾ.ಸಾ.ಸಂಖ್ಯೆಃ 26**